


'ಹೆರಿಟೇಜ್ ವಾಕ್'
ಆರಂಭಗೊಳ್ಳುವ ಕಾಲುಪುರದ
ಸ್ವಾಮಿನಾರಾಯಣ ಮಂದಿರ

# ಎನಿತು ಚಂದ ಈ ಪಾರಂಪರಿಕ ನಡಿಗೆ

■ ಸ್ಮಿತಾ ಮೈಸೂರ

ಗುಜರಾತ್‌ನ ಅಹಮದಾಬಾದ್‌ನಲ್ಲಿ ಸಂಸ್ಕೃತಿ, ಐತಿಹಾಸಿಕ ದೇವಾಲಯಗಳು, ಓಣಿ, ಕಟ್ಟಡಗಳು, ಬಾವಿ, ಮಸೀದಿ ಮೊದಲಾದವುಗಳನ್ನು ಸಂರಕ್ಷಿಸಿ ಆಸಕ್ತರಿಗೆ ಪರಿಚಯಿಸುವ ಕಾರ್ಯಕ್ರಮವೊಂದಿದೆ. ಅದೇ 'ಹೆರಿಟೇಜ್ ವಾಕ್', ಅರ್ಥಾತ್ 'ಪಾರಂಪರಿಕ ನಡಿಗೆ'.

ಅಹಮದಾಬಾದ್ ನಗರದ ಭಾಗವಾಗಿರುವ ಕಾಲುಪುರದ ಇತಿಹಾಸ ಪ್ರಸಿದ್ಧ ಸ್ವಾಮಿ ನಾರಾಯಣ ದೇಗುಲದಿಂದ ಆರಂಭಗೊಂಡು ಮಾಣೆಕ್‌ಬಾಗದಲ್ಲಿರುವ ಜುಮ್ಮಾ ಮಸೀದಿಗೆ ಕೊನೆಗೊಳ್ಳುತ್ತದೆ. 'ಮಂದಿರದಿಂದ ಮಸೀದಿವರೆಗೆ ನಮ್ಮ ಈ ನಡಿಗೆ' ಎಂದು ಗೈಡ್ ಹೇಳಿದರು.

ಅಹಮದಾಬಾದ್ ಮುನ್ಸಿಪಲ್ ಕಾರ್ಪೊರೇಷನ್ ಮತ್ತು ಅಕ್ಷರ ಟ್ರಾವೆಲ್ಸ್ ಗ್ರೂಪ್ ಸಹಯೋಗದಲ್ಲಿ ಸಾಗುತ್ತದೆ ಈ ನಡಿಗೆ. ಅಹಮದಾಬಾದ್ ಅನ್ನು ಯುನೆಸ್ಕೋ ವಿಶ್ವಸ್ಮಾರಕ ನಗರ ಎಂದು ಘೋಷಿಸಿದೆ. ಜನರನ್ನು ಇತಿಹಾಸದೊಂದಿಗೆ ಬೆಸೆಯುವುದು, ಭವ್ಯ ಪರಂಪರೆಯನ್ನು ತಿಳಿಸುವುದು ಈ ನಡಿಗೆಯ ಮುಖ್ಯ ಉದ್ದೇಶ.

ಬೆಳಿಗ್ಗೆ ಸ್ವಾಮಿನಾರಾಯಣ ದೇವಸ್ಥಾನದ ಆವರಣದಲ್ಲಿರುವ ಕಚೇರಿಯಲ್ಲಿ 15 ನಿಮಿಷಗಳ ಪಾರಂಪರಿಕ ನಡಿಗೆಯ ವಿವರ ತಿಳಿಸುವ ಶೋ ನಡೆಯುತ್ತದೆ. ನಂತರ ಮಾರ್ಗದರ್ಶಕರು ಜೊತೆಗೂಡುತ್ತಾರೆ. ಮೊದಲು ಸ್ವಾಮಿನಾರಾಯಣ ದೇಗುಲ ಭೇಟಿ. ಈ ದೇವಾಲಯವನ್ನು 19ನೇ ಶತಮಾನದ ಆರಂಭದಲ್ಲಿ ಸ್ವಾಮಿ ನಾರಾಯಣರ ಕೋರಿಕೆಯ ಮೇರೆಗೆ ಆಗಿನ ಬ್ರಿಟಿಷ್ ಅಧಿಕಾರಿಗಳು ನಿರ್ಮಿಸಿದ್ದಾರೆ. ಅನೇಕ ಬದಲಾವಣೆಗಳನ್ನು ದೇವಾಲಯ ಕಂಡಿದೆ. ಜಾನಪದ ಕಥೆಗಳಲ್ಲಿನ ಅರಮನೆಯಂತೆ ಸುಂದರವಾದ ಕೋನಾಕೃತಿಗಳಿಂದ ಅನೇಕ ಪ್ರಾಕಾರಗಳನ್ನು ಒಳಗೊಂಡಿದೆ. ದೇವಾಲಯದ ಗೋಡೆಗಳು ಗುಜರಾತಿನ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಚಿತ್ರಕಲೆಗಳಿಂದ ಅಲಂಕೃತಗೊಂಡಿವೆ. ಇಲ್ಲಿರುವ ನರ ನಾರಾಯಣರ ಮತ್ತು ರಾಧಾಕೃಷ್ಣ ಎಂದೂ ಕರೆಯುವ ಈ ಮೂರ್ತಿಗಳ ಉಡುಪುಗಳು ತಮ್ಮ ಕಲಾತ್ಮಕ ಕುಸುರಿಗಳಿಂದ ಗಮನಸೆಳೆಯುತ್ತವೆ. ದಿನದಲ್ಲಿ ಏಳು ಬಾರಿ ಈ ಉಡುಪುಗಳನ್ನು ಬದಲಾಯಿಸುತ್ತಾರೆ. ಪ್ರತಿ ಬಾರಿಯೂ ಹೊಸ ಉಡುಪುಗಳೇ.

ಮುಂದೆ ಒಂದು ಚಿಕ್ಕ ಓಣಿಯ ಮುಖಾಂತರ ಗುಜರಾತಿನ ಪ್ರಸಿದ್ಧ ಕವಿ ದಳಪತರಾಮ ಅವರ ಚೌಕಕ್ಕೆ ಕರೆದೊಯ್ಯಲಾಯಿತು. ದಳಪತರಾಮ 19ನೇ ಶತಮಾನದ ಕವಿ. ಕವನಗಳ ಮೂಲಕ ವಿಧವಾವಿವಾಹ ಪ್ರೋತ್ಸಾಹಿಸಿ ಬಾಲ್ಯವಿವಾಹ ತಡೆಗಟ್ಟಲು ಪ್ರಯತ್ನಿಸಿದರು. ಸಮಾಜದ ಕೆಳವರ್ಗದ ಜನರನ್ನು ಮುಂಚೂಣಿಗೆ ತಂದ ಕ್ರಾಂತಿಕಾರಿ. ಅವರ ಮನೆ ಬಿದ್ದು ಹೋದರೂ ಮೂಲರೂಪದಂತೇ ಪುನಃ ನಿರ್ಮಾಣ